ಅಂತಹದನ್ನು ಕೊಂಡುಕೊಂಡಾಗ ನಾವು ಹೋಗಿ ಅದನ್ನು ಖರೀದಿಸಲು ಬಯಸುತ್ತೇವೆ. ಆಗ ಅದು ಅಲ್ಲಿ ಮಾರಾಟವಾಗಿ ಬಿಟ್ಟಿರುತ್ತದೆ. ಅಯ್ಯೋ ಮುಗಿದು ಹೋಯಿತ್ತಲ್ಲ ಎಂದು ಬೇಸರ ಪಡುತ್ತೇವೆ.

ಇದಕ್ಕೆ ಉತ್ತಮ ಪರಿಹಾರ ಆನ್‌ಲೈನ್ ಫ್ಯಾಷನ್ ಸೈಟ್‌ಗಳು. ನಿಮ್ಮ ಇಷ್ಟದ ಬಣ್ಣ ಮತ್ತು ಬ್ರ್ಯಾಂಡ್‌ಗಳನ್ನು ಆಯ್ಕೆ ಮಾಡುವ ಸೌಲಭ್ಯ ಇಲ್ಲಿರುತ್ತದೆ. ಹೀಗಾಗಿ ಈಗಿನ ಫ್ಯಾಷನ್ ದುನಿಯಾದಲ್ಲಿ ಎಲ್ಲರನ್ನು ಮೋಡಿ ಮಾಡಿರುವುದು ಟ್ರೌಸರ್‌ಗಳು. ಧರಿಸಲು ಆರಾಮದಾಯಕವಾಗಿದ್ದು ಟ್ರೆಂಡಿ ಲುಕ್ ನೀಡುತ್ತದೆ. ಆನ್‌ಲೈನ್  ಮಾಡುಕಟ್ಟೆಯಲ್ಲಿ ಇದಕ್ಕೆ ಭಾರಿ ಬೇಡಿಕೆ ಇದೆ. ಈ ಟ್ರೌಸರ್‌ಗಳು ಹಲವು ವಿಧ. ಬಣ್ಣ, ಡಿಸೈನ್‌ಗಳಲ್ಲಿ ಲಭ್ಯವಿದೆ. ಕೇವಲ 500 ರಿಂದ 700 ಬೆಲೆಯಲ್ಲಿ ನಿಮಗೆ ದೊರೆಯುತ್ತದೆ.



### ಪ್ರಿಂಟೆಡ್ ಹಿಪ್ಪಿ ಪ್ಯಾಂಟ್ಸ್

ಈ ಬೊಹೊ ಪ್ಯಾಂಟ್ಸ್ ನಿಮಗೆ ವಿವಿಧ ಪ್ರಿಂಟ್‌ಗಳಲ್ಲಿ ದೊರಕುತ್ತದೆ, ಎನಿಮಲ್, ಟ್ರೈಬಲ್ ಪ್ರಿಂಟ್ ಹೀಗೆ ಹೇವಿ ಡಿಸೈನ್‌ಗಳಲ್ಲಿ ದೊರಕುತ್ತದೆ. ಬೀಚ್ ಪಾರ್ಟಿ, ಸಮ್ಮರ್ ಗೆಟ್ ಟುಗೇದರ್ ಗಳಿಗೆ ಉತ್ತಮವಾದ ದಿರಿಸು. ಹೆವಿ ಡಿಸೈನ್ ಇರುವ ಕಾರಣ ಪ್ಲೈನ್ ಆದ ಟಾಪ್ ಧರಿಸುವುದು ಉತ್ತಮ.

### ಟ್ಯಾಪರ್ಡ್ ಪ್ಯಾಂಟ್ಸ್

ದೈನಂದಿನ ಫಾರ್ಮಲ್ ಧರಿಸಿ ಬೋರ್ ಆಗಿದ್ದರಾ? ಹಾಗಿದ್ದರೆ ಹೊಸ ಸ್ವರೂಪದ ಟ್ಯಾಪರ್ಡ್ ಪ್ಯಾಂಟ್ಸ್ ಟ್ರೈ ಮಾಡಿ. ಕ್ರಿಸ್ಪ್ ಶರ್ಟ್‌ನೊಂದಿಗೆ ನೀವು ಇದನ್ನು ಧರಿಸಬಹುದು. ಇದರ ಡಿಸೈನ್ ಹೆವಿಯಾಗಿರದೆ ಸಣ್ಣ ಸಣ್ಣ ಡಿಸೈನ್‌ನಲ್ಲಿ ಲಭ್ಯವಿರುತ್ತದೆ, ಬಟ್ಟೆ ರಬ್ಬರ್ ಮೆಟೀರಿಯಲ್ ಆರಿರುತ್ತದೆ. ಲೈಟ್ ಕಲರ್ಸ್ ಉತ್ತಮವಾಗಿರುತ್ತದೆ. ತೆಳ್ಳಗಿರುವವರಿಗೆ ಉತ್ತಮ. ಈ ಟ್ರೌಸರ್ ಅನ್ನು ವೆಡ್ಜ್‌ಗಳೊಂದಿಗೆ ಧರಿಸಿದರೆ ಸುಂದರವಾಗಿ ಕಾಣಬಹುದು.

### ಲೇಸ್ ವರ್ಕ್ ಟ್ರೌಸರ್

ಲೇಸ್ ಪ್ರಿಯರಿಗೆ ಹೇಳಿ ಮಾಡಿಸಿದ ಪ್ಯಾಂಟ್ ಇದಾಗಿದೆ. ರಾತ್ರಿ ಪಾರ್ಟಿ ವೇಳೆಗೆ ಇದು ಸೂಕ್ತವಾದುದಾಗಿದೆ. ಕಪ್ಪು ಸ್ಟ್ರಿಂಗ್ ಟಾಪ್‌ನೊಂದಿಗೆ ಮ್ಯಾಚ್ ಮಾಡಿ ತೊಟ್ಟುಕೊಳ್ಳಬಹುದು. ಇದು ಯಾವುದೇ ಡಿಸೈನ್ ಹೊಂದಿರುವುದಿಲ್ಲ. ಫ್ಯಾಬ್ರಿಕ್ ಬಟ್ಟೆಯಾಗಿರುತ್ತದೆ.

### ಪೋಲ್ಕಾ ಡಾಟ್ ಪ್ಯಾಂಟ್

ನಿಮ್ಮ ಕ್ಯಾಶುವಲ್ ಲುಕ್‌ಗೆ ಇದು ಸೂಕ್ತವಾದ್ದು ಮತ್ತು ಆರಾಮದಾಯಕವಾದದ್ದು. ವಿವಿಧ ಬಣ್ಣಗಳಲ್ಲಿ ದೊರೆಯುತ್ತದೆ ಅಲ್ಲದೆ ಸಖತ್ ಲುಕ್ ನೀಡುತ್ತದೆ. ಸಿನಿಮಾ, ಶಾಪಿಂಗ್ ಮುಂತಾದ ಸಂದರ್ಭಗಳಿಗೆ ಉತ್ತಮ. ಯಾವುದೇ ತರಹದ ಟಾಪ್‌ಗಳು ಇದಕ್ಕೆ ಮ್ಯಾಚ್ ಆಗುತ್ತದೆ.

### ಪಲಾಜೊ ಪ್ಯಾಂಟ್

ನೋಡುವಾಗ ಲಂಗ ಧರಿಸಿದ ಹಾಗೇ ಕಾಣುತ್ತದೆ. ಆದರೆ ಇದು ಪ್ಯಾಂಟ್ ಆಗಿದ್ದು ಫುಲ್ ಸ್ಲೀವ್ಸ್ ಟಾಪ್‌ಗಳಿಗೆ ಸುಂಧರವಾಗಿ ಕಾಣುತ್ತದೆ. ವಿವಿಧ ಬಣ್ಣ, ಡಿಸೈನ್, ಮೆಟೀರಿಯಲ್‌ಗಳಲ್ಲಿ ಲಭ್ಯ. ಲಾಂಗ್ ಟಾಪ್‌ಗಳಿಗೆ ಧರಿಸಿದರೆ ಉತ್ತಮ. ■

# ಜೀನ್ಸ್ ಪ್ಯಾಂಟ್ ಮೋಹ

■ ಪದ್ಮಾ ಮೂರ್ತಿ

ಜೀನ್ಸ್ ಪ್ಯಾಂಟ್ ಧರಿಸುವುದು ಇತ್ತೀಚೆಗೆ ಹೆಣ್ಣು ಮಕ್ಕಳಿಗೆ ಫ್ಯಾಷನ್ ಆಗಿಬಿಟ್ಟಿದೆ. ಜೀನ್ಸ್ ಹಾಕುವ ಹುಡುಗಿಯರ ಸಂಖ್ಯೆಯೂ ಜಾಸ್ತಿಯಾಗುತ್ತಿದೆ. ಈ ಹೆಣ್ಣುಮಕ್ಕಳಿಗೆ, ಇದು ಕಂಫರ್ಟಬಲ್ ಹೌದೋ ಅಲ್ಲವೋ, ಅದು ಬೇರೆ ವಿಷಯ.. ಒಟ್ಟಿನಲ್ಲಿ ಎಲ್ಲರೂ ನನ್ನನ್ನು ಗಮನಿಸುತ್ತಾ ಇರಬೇಕು.. ನನ್ನ ಸೌಂದರ್ಯ ಎದ್ದು ಕಾಣುವಂತೆ ಇರಬೇಕು ಎಂಬ  ಅಪ್ರಬುದ್ಧ ಭಾವ.

ಈ ಟೈಟ್ ಜೀನ್ಸ್ ಆರೋಗ್ಯಕ್ಕೆ ಎಷ್ಟು ಹಾನಿ ಉಂಟು ಮಾಡುತ್ತದೆ ಎನ್ನುವುದು ಅವರಿಗೆ ತಿಳಿದಿರಲಾರದು. ಅವರ ಯೋಚನೆ ಒಂದೇ. **bold and confident** ಆಗಿ ಕಾಣಬೇಕು, ಸ್ಟೈಲಿಶ್ ಆಗಿರಬೇಕು, ತಮ್ಮ ಮಾಡ್ರನ್ ಸ್ಟೈಲ್ ನಿಂದ ಗಮನ ಸೆಳೆಯಬೇಕು ಎಂಬುದು.

ಜೀನ್ಸ್ ಪ್ಯಾಂಟ್ ಧರಿಸುವುದರಿಂದ ಆರೋಗ್ಯ ಸಮಸ್ಯೆಯೂ ಕಾಡಬಹುದು. ಹಗಲೆಲ್ಲಾ ಈ ಉಡುಪು ಧರಿಸಿದಾಗ ಶರೀರಕ್ಕೆ ಸರಿಯಾದ ಗಾಳಿ ಸಂಚಾರವಿರದೆ, ಪ್ರಜ್ಞೆ ಕಳೆದುಕೊಂಡಂತಾಗಿ. ಬವಳಿಬರುವುದುಂಟು. ಇದು ಬೆನ್ನಿನ ಸ್ನಾಯುಗಳನ್ನು ಹಿಡಿತದಲ್ಲಿಟ್ಟು ಮೂಳೆಯ ಚಲನೆಗೆ ಅಡ್ಡಿಪಡಿಸುತ್ತದೆ.



ಜೀನ್ಸ್ ಟೈಟಾದಾಗ ಅದು ಹೊಟ್ಟೆ ಮುಂಭಾಗಕ್ಕೆ ಒತ್ತುವುದರಿಂದ ಒತ್ತಡ ಜಾಸ್ತಿಯಾಗಿ ಹೊಟ್ಟೆನೋವು, ಹೊಟ್ಟೆಗೆ ಸಂಬಂಧಿಸಿದ ಇತರ ಸಮಸ್ಯೆಗಳು ಕಾಣಿಸಿ ಕೊಳ್ಳಬಹುದು. ಆಫೀಸಿಗೆ ಹೋಗುವ, ಹೆಣ್ಣುಮಕ್ಕಳು,  ಕಾಲೇಜು ಹುಡುಗಿಯರು ಈ ಟೈಟ್ ಜೀನ್ಸ್ ಕಾರಣದಿಂದ ಕುರ್ಚಿ ಮೇಲೆ ಕುಳಿತು, ಏಳುವುದು ಎಷ್ಟು ಕಷ್ಟ ವೆಂದು ನೋಡಿದಾಗ ಈ ಜೀನ್ಸ್ ಪ್ಯಾಂಟ್ ಹಾಕಲೇ ಬೇಕೆ ಎಂಬ ಪ್ರಶ್ನೆ ಕಾಡುತ್ತದೆ.

ಈ ಟೈಟ್ ಉಡುಪಿನಿಂದ ಬಲುಬೇಗನೆ ಹೆಣ್ಣು ಮಕ್ಕಳು ಸುಸ್ತು, ಸಂಕಟಕ್ಕೆ ಒಳಗಾಗುವುದುಂಟು. ಇದರ ಪ್ರಭಾವ ಅವರ ಕೆಲಸ ಕಾರ್ಯದ ಮೇಲೂ ಆಗುತ್ತದೆ. ಅಧ್ಯಯನದಲ್ಲಿ ಏಕಾಗ್ರತೆಯನ್ನು ಸಾಧಿಸಲು ಆಗುವುದಿಲ್ಲ. ತಮ್ಮ ಕೆಲಸ ಕಾರ್ಯದ ಮೇಲೆ ಗಮನ ಇರುವುದಿಲ್ಲ.. ಎಂಬುದು ತಜ್ಞರ ಅಭಿಮತ.ಆದರೂ ಜೀನ್ಸ್ ತೊಡಬೇಕು ಎಂಬ ಮಹಿಳೆಯರ ಕನಸು ಕಮರಿಸುವ ಅಗತ್ಯವಿಲ್ಲ. ದಿನವಿಡೀ ಜೀನ್ಸ್ ಧರಿಸುವ ಬದಲಿಗೆ ಈ ಅವಧಿಯನ್ನು ಕಡಿಮೆ ಮಾಡಿಕೊಳ್ಳಿ. ಅಗತ್ಯ ಇದ್ದಾಗ ಮಾತ್ರ ಜೀನ್ಸ್ ಧರಿಸಿ.

ಆರೋಗ್ಯದ ನಿಟ್ಟಿನಲ್ಲಿ..

ಈ ಉಡುಪಿನಿಂದ ಚರ್ಮಕ್ಕೆ ಸಂಬಂಧಪಟ್ಟ ಸೋಂಕು ಹರಡುವ ಸಂಭವವೂ ಇದೆ ಎಂಬುದು ವೈದ್ಯರ ಅಭಿಪ್ರಾಯ. ಮುಖ್ಯವಾಗಿ ದೇಹದ ಎಲ್ಲೆಲ್ಲಿ ಬೆವರು ಜಾಸ್ತಿ ಸುರಿಯುತ್ತದೋ ಅಂತಹ ಕಡೆ ಇದು ಕಾಣಿಸಿಕೊಳ್ಳುತ್ತದೆ. ಹೆಣ್ಣು ಮಕ್ಕಳಿಗೆ ಹೀಗೆ ಅನುಭವವಾದಾಗ ತಕ್ಷಣವೇ ಸ್ವಲ್ಪ ದಿವಸ ಸಡಿಲ ಉಡುಪುಗಳನ್ನು ಹಾಕಿ ನೋಡಿ, ನಿಮ್ಮ ಅನುಭವಕ್ಕೆ ಆ ವ್ಯತ್ಯಾಸ ತಿಳಿದು ಬರುತ್ತದೆ. ಚರ್ಮದ ಸೋಂಕು ಉಂಟಾದರೆ ದೇಹದಲ್ಲಿ ಉರಿ, ನವೆ, ಕಡಿತ ನೋವು ಶುರುವಾಗಬಹುದು. ಜತೆಗೆ ಎಷ್ಟೋ ಟೈಟ್ ಔಟ್ ಫಿಟ್ಸ್ ಬಟ್ಟೆಗಳಿಂದಲೂ ಭಾದೆ ತಪ್ಪಿದ್ದಲ್ಲ... ಅದರಲ್ಲಿ ಮುಖ್ಯವಾಗಿ ಶೇಪ್ ವೇರ್ ಮಾತ್ರವಲ್ಲದೇ ಟೈಟ್ ಬ್ರಾ, ಪ್ಯಾಂಟಿ , ಬಿಗಿ ಟೈಟ್ ಬೆಲ್ಟ್ ಇತ್ಯಾದಿಗಳು ಕೂಡ ಶರೀರಕ್ಕೆ ಮಾರಕ ಎನ್ನಬಹುದು. ಬೇಸಿಗೆಯಲ್ಲಂತೂ ಇಂತಹ ಬಿಗಿ ಉಡುಪುಗಳು ಬೇಡವೇ ಬೇಡ. ದೇಹಕ್ಕೆ ಆಹ್ಲಾದ ನೀಡುವ ಸಡಿಲವಾದ ಕಾಟನ್ ಉಡುಪುಗಳನ್ನೇ ಧರಿಸಿ. ■